International Journal of Kannada Research 2023; 9(2): 154-155

International Journal of Kannada Research
www.kannadajournal.com

ISSN: 2454–5813
IJKR 2023; 9(2): 154-155
© 2023 IJKR
www.kannadajournal.com
Received: 01-02-2023
Accepted: 06-03-2023

**ಶ್ರೀನಿವಾಸ**
ಸಹಾಯಕ ಪ್ರಾಧ್ಯಾಪಕರು,
ಇತಿಹಾಸ ಮತ್ತು ಪುರಾತತ್ವ
ಅಧ್ಯಯನ ಮತ್ತು ಸಂಶೋಧನಾ
ವಿಭಾಗ, ತುಮಕೂರು
ವಿಶ್ವವಿದ್ಯಾಲಯ,ತುಮಕೂರು,
ಕರ್ನಾಟಕ, ಭಾರತ

**Corresponding Author:**
**ಶ್ರೀನಿವಾಸ**
ಸಹಾಯಕ ಪ್ರಾಧ್ಯಾಪಕರು,
ಇತಿಹಾಸ ಮತ್ತು ಪುರಾತತ್ವ
ಅಧ್ಯಯನ ಮತ್ತು ಸಂಶೋಧನಾ
ವಿಭಾಗ, ತುಮಕೂರು
ವಿಶ್ವವಿದ್ಯಾಲಯ,ತುಮಕೂರು,
ಕರ್ನಾಟಕ, ಭಾರತ

# ತಿಪಟೂರು ತಾಲ್ಲೂಕಿನ ಶಾಸನಗಳು–ಒಂದು ಅವಲೋಕನ

**ಶ್ರೀನಿವಾಸ**

**ಪೀಠಿಕೆ**

ತುಮಕೂರು ಜಿಲ್ಲೆಯ ಹತ್ತು ತಾಲ್ಲೂಕುಗಳಲ್ಲಿ ಒಂದಾಗಿರುವ ತಿಪಟೂರು ತಾಲೂಕಿನಲ್ಲಿ ತೆಂಗಿನ ಬೇಸಾಯ ಹೇರಳವಾಗಿರುವುದರಿಂದ ಕಲ್ಪತರು ನಾಡು ಎಂದು ಕರೆಯುವ ವಾಡಿಕೆಯಿದೆ. ಇಂದಿವನ ತಿಪಟೂರು ತಾಲ್ಲೂಕನ್ನು ಕ್ರಿ.ಶ.೧೮೬೬ರವರೆಗೆ ಹೊನ್ನವಳ್ಳಿ ತಾಲ್ಲೂಕೆಂದು ಕರೆಯಲಾಗುತ್ತಿತ್ತು. ಸಾಂಸ್ಕೃತಿಕವಾಗಿ ತನ್ನದೇ ಆದ ಮಹತ್ವವನ್ನು ಹೊಂದಿರುವ ಈ ತಾಲ್ಲೂಕು ಪ್ರಾಗೈತಿಹಾಸಿಕವಾಗಿ ಹಾಗೂ ಚಾರಿತ್ರಿಕವಾಗಿಯೂ ಮಹತ್ವ ಪಡೆದಿದೆ. ಬಿ.ಎಲ್.ರೈಸ್ ರವರು ಪ್ರಥಮವಾಗಿ ಸಂಪಾದಿಸಿರುವ ಎಫಿಗ್ರಾಫಿಯಾ ಕರ್ನಾಟಿಕಾದ ೧೨ನೆಯ ಸಂಪುಟದಲ್ಲಿ ತುಮಕೂರು ಜಿಲ್ಲೆಯ ಶಾಸನಗಳ ಮಾಹಿತಿ ಇದ್ದು, ಇದೇ ಸಂಪುಟದಲ್ಲಿ ತಿಪಟೂರು ತಾಲ್ಲೂಕಿನ ಸುಮಾರು ೧೪೫ಮಾಹಿತಿ ಇದೆ. ಈ ಶಾಸನಗಳು ಗಂಗರ ಹೊಯ್ಸಳರ, ವಿಜಯನಗರ ಅರಸರ ಹಾಗೂ ಮೈಸೂರು ಒಡೆಯರ ಕಾಲಕ್ಕೆ ಸೇರಿದವುಗಳಾಗಿವೆ. ಈ ನಿಟ್ಟಿನಲ್ಲಿ ಈ ತಾಲ್ಲೂಕಿನಲ್ಲಿ ದೊರೆತಿರುವ ಕೆಲವು ಶಾಸನಗಳನ್ನು ಅವಲೋಕಿಸುವ ಉದ್ದೇಶವನ್ನು ಈ ಲೇಖನವು ಹೊಂದಿದೆ.

ಅದರಂತೆ, ತಿಪಟೂರು ತಾಲ್ಲೂಕಿನ ಹಟ್ಟಣದ ಬಸ್ತಿಯಲ್ಲಿರುವ ಹೊಯ್ಸಳ ವೀರಬಲ್ಲಾಳನ ಶಾಸನ[೧] ದ ಪ್ರಕಾರ 'ಹಟ್ಟಣದಲ್ಲಿದ್ದ ಮಾಣಿಕ ನಂದಿದೇವರಿಗೆ ಪುಣ್ಯವಾಗಲಿಯೆಂದು ಅಲ್ಲಿನ ನಖರ ಜಿನಾಲಯಕ್ಕೆ ಹಿರಿಯ ಕೆರೆಯ ಸಮೀಪ ಗದ್ದೆಯನ್ನು, ಕಾಳಿಸೆಟ್ಟಿಯ ಕೆರೆಯ ಕೋಡಿಯ ಹತ್ತಿರ ಗದ್ದೆಯನ್ನು ದಾನ ಬಿಡಲಾಗಿದೆ. ಹಾಗೆಯೇ ಭುಜ್ಯಯಣನ ಕೆರೆ, ಮದ್ದಬೋವನ ಕೆರೆ, ಮಾದಿಸೆಟ್ಟಿ ಕೆರೆ, ಮದಗದೇವಸೆಟ್ಟಿ ಕೆರೆಯ ಸಮೀಪವೂ ಸ್ವಲ್ಪ ಸ್ವಲ್ಪ ಗದ್ದೆಯನ್ನು ದಾನ ಬಿಡಲಾಗಿದೆ. ಜೊತೆಗೆ ಆ ಪಟ್ಟಣದ ದೇವರಿಗೆ ದೀಪದ ಎಣ್ಣೆಗೆ ಒಂದು ಗಾಣವನ್ನು ದಾನ ಬಿಟ್ಟ ವಿವರವೂ ಇದೆ. ಈ ಶಾಸನದ ಕವಿ ರೊದ್ದದ ಹಾಲೋಜನ ಮಗ ಬೀರೋಜ. ಈ ಶಾಸನದಲ್ಲಿ ದಾನದ ವಿವರದ ಜೊತೆಗೆ ದಾನಧರ್ಮದಲ್ಲಿ ಹೆಸರು ಮಾಡಿದ ಸಾಸಲು ಬಂಮ್ಮಯ್ಯ, ಜೌಕಿಸೆಟ್ಟಿ, ಮಾಚಿಸೆಟ್ಟಿ, ಕಾಳಿಸೆಟ್ಟಿ ಮುಂತಾದವರನ್ನು ಕೀರ್ತಿಸಲಾಗಿದೆ. ಇವರ ಹೆಸರಿನಲ್ಲಿ ಕೆರೆಗಳೂ ಇವೆ. ಹಿಂದೆ ವ್ಯಾಪಾರಸ್ಥರು ತಮ್ಮ ಲಾಭದಲ್ಲಿ ಒಂದು ಪಾಲನ್ನು ಧರ್ಮಕಾರ್ಯಗಳಿಗೆ ಉಪಯೋಗಿಸುತ್ತಿದ್ದದ್ದು ಗೊತ್ತಾಗುತ್ತದೆ.

ತಿಪಟೂರಿನ ದಬ್ಬೆಘಟ್ಟದಲ್ಲಿ ದೊರೆತಿರುವ ಕ್ರಿ.ಶ.೧೧೪೦ರ ಶಾಸನವು[೨] ನರಸಿಂಗಯ್ಯ ಎಂಬುವವನು ಕೆರೆ ಕಟ್ಟಿಸಿ, ಭೂದಾನ ನೀಡಿರುವುದನ್ನು ದಾಖಲಿಸಿದೆ. ಹಾಗೆಯೇ ಕ್ರಿ.ಶ.೧೧೬೨ಕ್ಕೆ ಸೇರಿರುವ ತಿಪಟೂರು ಶಾಸನದಲ್ಲಿ[೩] 'ನೊಣಂಬನ ಕೆರೆ ಹನ್ನೆರಡನ್ನು ಆಳುತ್ತಿದ್ದ ಉತ್ತಮ ಚೋಳನ ಮಗನಾದ ಮನಹಯ ಎಂಬುವನು ತನ್ನ ಉತ್ತಮ ಚೋಳನ ಹೆಸರಿನಲ್ಲಿ ಚೋಳೇಶ್ವರ ದೇವರನ್ನು ಪ್ರತಿಷ್ಠೆ ಮಾಡಿ, ಗಂಗರಾಸಿ ಪಂಡಿತರ ಪಾದವನ್ನು ತೊಳೆದು ಗುಡಿಯ ನಿರ್ವಹಣೆಗೆ ಹಿರಿಯ ಕೆರೆಯ ಬಳಿಯ ಗದ್ದೆಯನ್ನು ದಾನ ಬಿಡುತ್ತಾನೆ. ಅಲ್ಲದೆ ಚೋಳೇಶ್ವರ ದೇವರ ಪ್ರತಿದಿನದ ಶಂಖದ ಮೂಲಸ್ಥಾನದ ಕಲಿದೇವರಿಗೆ, ಗಂಗೇಶ್ವರ ದೇವರಿಗೆ, ಹೊನ್ನುಡಿಕೆಯ ದೇವಿಗಳಿಗೂ ಗದ್ದೆಯನ್ನು ದಾನ ನೀಡಲಾಗಿದೆ. ಅಂದರೆ ತಂದೆಯ ಹೆಸರಿನಲ್ಲಿ ಗುಡಿಕಟ್ಟಿಸಿ ಅದರ ಜೊತೆಯಲ್ಲಿ ಬೇರೆ ಗುಡಿಗಳಿಗೂ ದಾನ ನೀಡಿದ ಸತ್ಸಂಪ್ರದಾಯ ಈ ಶಾಸನದಿಂದ ತಿಳಿಯುತ್ತದೆ.

ತಿಪಟೂರು ತಾಲ್ಲೂಕಿನ ಅಲ್ಬೂರು ಶಾಸನದಲ್ಲಿ (ಕ್ರಿ.ಶ.೧೨೧೪) ಹಾಗೂ ಕೋಟಿನಾಯಕನಹಳ್ಳಿಯ ಶಾಸನದಲ್ಲಿ ಉಲ್ಲೇಖವಾಗಿರುವ ಬೊಮ್ಮಸೆಟ್ಟಿ ಮತ್ತು ಸೂರಿಸೆಟ್ಟಿ ಎಂಬ ವರ್ತಕರ ಬಗ್ಗೆ ಹಾಗೂ ವರ್ತಕ ಸಮುದಾಯವಾದ 'ನಕರರು ಈ ಪ್ರದೇಶಗಳಲ್ಲಿ ವ್ಯಾಪಾರ ಮಾಡುತ್ತಿದ್ದುದ್ದನ್ನೂ ದಾನ ಧರ್ಮ ನೀಡಿದ್ದನ್ನು ಉಲ್ಲೇಖಿಸಲಾಗಿದೆ.[೪] ಇದೇ ಅಲ್ಲದೆ ತಿಪಟೂರು ತಾಲ್ಲೂಕಿನ ಕ್ರಿ.ಶ.೧೨೦೫ರ ಅಲ್ಬೂರು

ಶಾಸನದಲ್ಲಿ ಉಲ್ಲೇಖವಾಗಿರುವ ‘ಅಯ್ಯಾಹೊಳೆ ೫೦೦’ ಎಂಬ ವರ್ತಕ ಸಂಘದ ಬಗ್ಗೆ, ತಿಪಟೂರು ತಾಲ್ಲೂಕಿನ ಘಟಕರನಕೆರೆ (ಕ್ರಿ.ಶ.೧೨೮೫) ಶಾಸನ ಹಾಗೂ ತಿಪಟೂರಿನ ಶಿವರ (ಕ್ರಿ.ಶ.೧೫೦೦) ಶಾಸನಗಳಲ್ಲಿ ನಗರಾಡಳಿತದಲ್ಲಿ ವಣಿಕ ಸಮುದಾಯದವರು ಹೊಂದಿದ್ದ ಅತ್ಯುಚ್ಚ ಸ್ಥಾನ ಗೌರವಗಳ ಬಗ್ಗೆ ಉಲ್ಲೇಖಿಸಲಾಗಿದೆ.[೫]

ತಿಪಟೂರು ತಾಲ್ಲೂಕಿನ ಶಿವರ ಎಂಬ ಪ್ರದೇಶದ ಕ್ರಿ.ಶ.೧೧೬೪ರ ಶಾಸನದಲ್ಲಿ[೬] ನರಸಿಂಹನ ದಂಡನಾಯಕ ಹೆಗ್ಗಡೆ ಮಾದಿಮಯ್ಯ ಶಿವುರ ಎಂಬಲ್ಲಿ ಮಹಾದೇವ ಮತ್ತು ಶ್ರೀ ಚನ್ನಕೇಶವ ದೇವರ ದೇವಾಲಯವನ್ನು ಪ್ರತಿಷ್ಠೆ ಮಾಡಿಸಿದನು. ಜೊತೆಗೆ ಇದೇ ಶಾಸನದಲ್ಲಿ ಆಚಾರ್ಯ ಅಪ್ಪಣ ಭಟ್ಟೋಪಾಧ್ಯಾಯ ಎಂಬುವರು ನಾರಾಯಣ ದೇವರನ್ನು ಪ್ರತಿಷ್ಠಾಪಿಸಿದಕ್ಕಾಗಿ, ದೇವತಾಸನ್ನಿದಾನವನ್ನು ಧಾರೆಯೆರೆದು ಕೊಟ್ಟನು. ಈ ಶಾಸನದಲ್ಲಿ ಮುಖ್ಯವಾಗಿ ನರಸಿಂಹನ ಅಧಿಕಾರಿ ಮಾದಿಮಯ್ಯ, ಮಹಾದೇವ ಹಾಗೂ ಕೇಶವದೇವರ ದೇವಾಲಯಗಳನ್ನು ಮಾಡಿಸಿ ಅದರ ಆಚಾರ್ಯನಿಗೆ ದಾನ ನೀಡುತ್ತಾನೆ. ಇಲ್ಲಿ ಒಬ್ಬನೇ ಅಧಿಕಾರಿ ಶೈವ ಮತ್ತು ವೈಷ್ಣವ ಎರಡೂ ಧರ್ಮಗಳಿಗೆ ದಾನ ನೀಡಿರುವುದು ವಿಶೇಷವಾಗಿದೆ.೮೩

ಹೊಯ್ಸಳರ ಒಂದನೇ ನರಸಿಂಹನ ಕಾಲಕ್ಕೆ ಸೇರಿದ ತಿಪಟೂರಿನ ಕ್ರಿ.ಶ.೧೧೬೭ರ ಶಾಸನದಲ್ಲಿ[೭] ಹೊಯ್ಸಳ ನರಸಿಂಹನ ಮಹಾಪ್ರಧಾನ ಉತ್ತಮ ಚೋಳನ ಮಗ ಮನ್ನಹ, ತನ್ನ ತಂದೆಯ ಹೆಸರಿನಲ್ಲಿ ಚೋಳೇಶ್ವರ ದೇವಾಲಯವನ್ನು ಪ್ರತಿಷ್ಠೆ ಮಾಡಿಸುತ್ತಾನೆ. ಈ ದೇವರ ನೈವೇದ್ಯಕ್ಕೆ, ನಂದಾದೀವಿಗೆಗೆ ಶ್ರೀ ಗಂಗರಾಶಿ ಪಂಡಿತನಿಗೆ ದಾನ ನೀಡಿದ ಉಲ್ಲೇಖವಿದೆ. ಇದೇ ಅಲ್ಲದೆ ತಿಪಟೂರು ತಾಲ್ಲೂಕಿನ ಕರಡಾಳುವಿನಲ್ಲಿ ದೊರೆತಿರುವ ಶಾಸನವು ಹೊಯ್ಸಳ ಅರಸ ಒಂದನೇ ನರಸಿಂಹನಿಗೆ “ರಾಯಹುಲಿರಾಯ ಮಲೆ ರಾಜರಾಜ ಮಲೆಪರೊಳಂಡ ಗಂಡಭೇರುಂಡ ಶ್ರೀವೀರನಾರಸಿಂಹದೇವ”[೮] ಎಂಬ ಬಿರುದಿದ್ದ ಬಗ್ಗೆ ಮಾಹಿತಿ ನೀಡುತ್ತದೆ. ಜೊತೆಗೆ ಕ್ರಿ.ಶ.೧೨೯ರಲ್ಲಿ ಬರೆಸಿದ ತಿಪಟೂರು ತಾಲೂಕಿನ ೪೨ನೇ ಸಂಖ್ಯೆಯ ಶಾಸರ್ನ, ಎರಡನೇ ನರಸಿಂಹನು ಸಮುದ್ರವನ್ನೇ ಸುತ್ತಲ ಮೇರೆಯನ್ನಾಗುಳ್ಳ ರಾಜ್ಯವನ್ನು ರಾಜಧಾನಿ ಕಂಚೀಪುರದಿಂದ ಆಳುತ್ತಿದ್ದನೆಂದು ತಿಳಿಸುತ್ತದೆ. ಜೊತೆಗೆ ಕ್ರಿ.ಶ.೧೨೬೩ರ ತಿಪಟೂರು ತಾಲೂಕಿನ ತುರುವೆಕೆರೆ(ಪ್ರಸ್ತುತ ತಾಲ್ಲೂಕು ಕೇಂದ್ರ) ಚನ್ನಿಗರಾಯ ದೇವಾಲಯದಲ್ಲಿರುವ ಶಾಸನದಿಂದ ಮುಮ್ಮಡಿ ನರಸಿಂಹನ ವಿದೇಶಾಂಗ ಮತ್ತು ರಕ್ಷಣಾ ಮಂತ್ರಿಯಾಗಿದ್ದ ರಾವಣ್ಣ ದಣ್ಣಾಯಕನು, ತುರುವೇಕೆರೆಯನ್ನು ದೊರೆಯಿಂದ ಬಳುವಳಿಯಾಗಿ ಪಡೆದು ಅದನ್ನು ೯೬ ವಿಭಾಗಗಳನ್ನೊಳಗೊಂಡ “ಸರ್ವಜ್ಞ ವಿಜಯ ನರಸಿಂಹಪುರ” ಎಂದು ಅಗ್ರಹಾರವನ್ನಾಗಿ ಮಾರ್ಪಡಿಸಿದ ಅಂಶ ಗೊತ್ತಾಗುತ್ತದೆ. ಹಾಗೆಯೇ ಕ್ರಿ.ಶ.೧೩೨೫ರ ತಿಪಟೂರು ತಾಲೂಕಿನ ಕಡಸೂರು ಶಾಸನ[೧೦] ’ವು ಕ್ರಿ.ಶ.೧೨೯೧ ರಿಂದ ೧೩೪೨ರವರೆಗೆ ಆಳಿದ ಹೊಯ್ಸಳರ ಪ್ರಸಿದ್ಧ ದೊರೆ ಮುಮ್ಮಡಿ ಬಲ್ಲಾಳ ದೋರಸಮುದ್ರದಲ್ಲಿದ್ದನೆಂದು ತಿಳಿಸುತ್ತದೆ.

ಒಟ್ಟಾರೆ ತಿಪಟೂರು ತಾಲ್ಲೂಕಿನಲ್ಲಿ ೧೩೯ಕ್ಕಿಂತಲೂ ಹೆಚ್ಚು ಶಾಸನಗಳಿದ್ದು, ಆರಂಭದಿಂದ ವಿಜಯನಗರದ ಅರಸರವರೆಗೂ ಈ ಭಾಗ ರಾಜಕೀಯವಾಗಿ ಹಾಗೂ ಸಾಂಸ್ಕೃತಿಕವಾಗಿ ಮಹತ್ವದ ಸ್ಥಾನವನ್ನು ಪಡೆದಿತ್ತು ಎಂಬುದನ್ನು ಈ ಶಾಸನಗಳು ತಿಳಿಸುತ್ತವೆ.

**ಕೊನೆ ಟಿಪ್ಪಣಿಗಳು**

೧. ರೈಸ್.ಬಿ.ಎಲ್., ೧೯೦೪, ಎಪಿಗ್ರಾಫಿಯಾ ಕರ್ನಾಟಿಕಾ, ಸಂಪುಟ.೧೨, ಶಾಸನ ಸಂಖ್ಯೆ. ೧೦೧, ಹಟ್ಟಣ, ತಿಪಟೂರು (ತಾ), ಕ್ರಿ.ಶ.೧೦೭೮, ಬೆಂಗಳೂರು, ಮೈಸೂರು ಗೌರ್ವರ್ನಮೆಂಟ್ ಸೆಂಟ್ರಲ್ ಪ್ರೆಸ್
೨. ರೈಸ್.ಬಿ.ಎಲ್., ೧೯೦೪, ಎಪಿಗ್ರಾಫಿಯಾ ಕರ್ನಾಟಿಕಾ, ಸಂಪುಟ.೧೨, ಶಾಸನ ಸಂಖ್ಯೆ.೧೬೨, ತಿಪಟೂರು, ಕ್ರಿ.ಶ.೧೧೪೦, ಬೆಂಗಳೂರು, ಮೈಸೂರು ಗೌರ್ವರ್ನಮೆಂಟ್ ಸೆಂಟ್ರಲ್ ಪ್ರೆಸ್
೩. ಪಾಟೀಲ.ಎಂ.ಬಿ., ತುಮಕೂರು ಜಿಲ್ಲೆಯ ವಾಣಿಜ್ಯ ವೈಭವ, ಕಾಮತ್, ಸೂರ್ಯನಾಥ ಮತ್ತು ತೆಲಗಾವಿ, ಲಕ್ಷ್ಮಣ (ಸಂ), ೧೯೮೯, ಇತಿಹಾಸ ದರ್ಶನ ಸಂಪುಟ.೪, ಬೆಂಗಳೂರು, ಕರ್ನಾಟಕ ಇತಿಹಾಸ ಅಕಾಡಮಿ
೪. ಪಾಟೀಲ.ಎಂ.ಬಿ., ತುಮಕೂರು ಜಿಲ್ಲೆಯ ವಾಣಿಜ್ಯ ವೈಭವ, ಕಾಮತ್, ಸೂರ್ಯನಾಥ ಮತ್ತು ತೆಲಗಾವಿ, ಲಕ್ಷ್ಮಣ(ಸಂ), ೧೯೮೯, ಇತಿಹಾಸ ದರ್ಶನ ಸಂಪುಟ.೪, ಬೆಂಗಳೂರು, ಕರ್ನಾಟಕ ಇತಿಹಾಸ ಅಕಾಡಮಿ
೫. ಪಾಟೀಲ.ಎಂ.ಬಿ., ತುಮಕೂರು ಜಿಲ್ಲೆಯ ವಾಣಿಜ್ಯ ವೈಭವ, ಕಾಮತ್, ಸೂರ್ಯನಾಥ ಮತ್ತು ತೆಲಗಾವಿ, ಲಕ್ಷ್ಮಣ (ಸಂ), ೧೯೮೯, ಇತಿಹಾಸ ದರ್ಶನ ಸಂಪುಟ.೪, ಬೆಂಗಳೂರು, ಕರ್ನಾಟಕ ಇತಿಹಾಸ ಅಕಾಡಮಿ
೬. ಗೋಪಾಲ್‌ರಾವ್.ಹೆಚ್.ಎಸ್.(ಸಂ), ಎಪಿಗ್ರಾಪಿಯಾ ಕರ್ನಾಟಿಕಾ, ಸಂಪುಟ.೨೫ ತಿಪಟೂರು, ಶಾಸನ ಸಂಖ್ಯೆ.೮೩, ಶೀವರ, ಪುಟ.೫೧೦, ಮೈಸೂರು, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ
೭. ಗೋಪಾಲ್‌ರಾವ್,ಹೆಚ್.ಎಸ್.(ಸಂ), ಎಪಿಗ್ರಾಪಿಯಾ ಕರ್ನಾಟಿಕಾ, ಸಂಪುಟ.೨೫, ತಿಪಟೂರು,ಶಾಸನ ಸಂಖ್ಯೆ.೪೮, ಪುಟ.೪೮೧, ಮೈಸೂರು, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ
೮. ಗೋಪಾಲರಾವ್,ಎಚ್.ಎಸ್,(ಸಂ), ಎಪಿಗ್ರಾಪಿಯಾ ಕರ್ನಾಟಿಕಾ, ಸಂಪುಟ.೨೫, ತಿಪಟೂರು, ಶಾಸನ ಸಂಖ್ಯೆ.೧೫, ಕರಡಾಳು, ಪುಟ.೧೮೦, ಮೈಸೂರು, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ
೯. ಗೋಪಾಲ್‌ರಾವ್,ಹೆಚ್.ಎಸ್.(ಸಂ), ಎಪಿಗ್ರಾಪಿಯಾ ಕರ್ನಾಟಿಕಾ, ಸಂಪುಟ.೨೫, ತಿಪಟೂರು,ಶಾಸನ ಸಂಖ್ಯೆ.೪೨, ಪುಟ.೪೭೮, ಮೈಸೂರು, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ
೧೦.ರೈಸ್.ಬಿ.ಎಲ್.,೧೯೦೪, ಎಪಿಗ್ರಾಫಿಯಾ ಕರ್ನಾಟಿಕಾ,ಸಂಪುಟ.೧೨, ಕಡಸೂರು, ಬೆಂಗಳೂರು, ಮೈಸೂರು ಗೌರ್ವರ್ನಮೆಂಟ್ ಸೆಂಟ್ರಲ್ ಪ್ರೆಸ್